ಮಾತೊಂದು ಚಾಲ್ತಿಯಲ್ಲಿದ್ದ ಕಾರಣ ನಮ್ಮಂಥ ಅತೀ ಸಾಮಾನ್ಯ ಜನರು ಸಾಧಾರಣವಾಗಿ ಅತ್ತ ಕಡೆ ಹೋಗುತ್ತಿರಲಿಲ್ಲ. ನಮ್ಮೂರು ನಿಜದಲ್ಲಿ ಹಣವಂತರ ಊರಾಗಿತ್ತು. ಅವರ ಹೊಲ ಗದ್ದೆಗಳಲ್ಲಿ ಮತ್ತು ಟೀ ಎಸ್ಟೇಟುಗಳಲ್ಲಿ ಕೆಲಸ ಮಾಡುವುದಕ್ಕೆಂದೇ ಇದ್ದ ನಮ್ಮಂಥ ಆಳುಮಕ್ಕಳು ಹಣವಂತರ ಲೆಕ್ಕದಲ್ಲಿ ಬರೇ ಆಳುಗಳಷ್ಟೇ ಆಗಿದ್ದೆವೇ ಹೊರತು ಹೆಚ್ಚೇನೂ ಆಗಿರಲಿಲ್ಲ. ಇನ್ನು ಧಣಿಗಳು ತಮ್ಮ ಕೆಲಸಕ್ಕೆಂದು ಕೆಲವು ಆಳುಮಕ್ಕಳನ್ನು ಬೆಟ್ಟಕ್ಕೆ ಕರೆದುಕೊಂಡು ಹೋಗುತ್ತಿದ್ದರು ಅನ್ನುವುದನ್ನು ಹೊರತು ಪಡಿಸಿದರೆ ನಮಗೂ ಬೆಟ್ಟಕ್ಕೂ ಹತ್ತಿರದ ಸಂಬಂಧವೇನೂ ಇರಲಿಲ್ಲ. ನಮಗೆ ಅದರ ಅವಶ್ಯಕತೆಯೂ ಇರಲಿಲ್ಲ. ನಮಗೆ ಇದ್ದೇ ಇತ್ತು ಮಾಡುಹೊಳೆ. ಈ ಮಾಡುಹೊಳೆ ಅದೇ ಮಾಡುಬೆಟ್ಟದ ತಪ್ಪಲಿನಲ್ಲೆಲ್ಲೋ ಹುಟ್ಟಿ, ಸಣ್ಣ ತೋಡಿನಂತೆ ಹರಿದುಬಂದು, ಬೆಟ್ಟದಂಚಿಂದ ಧುಮುಕುವಾಗ ಅದು ಹೇಗೋ ದೊಡ್ಡ ಜಲಪಾತವಾಗಿ, ಕಪ್ಪಗಿನ ಹಸೀ ಪಾರೆ ಕಲ್ಲುಗಳನ್ನು ಹಾದು ನಮ್ಮೂರ ಮಧ್ಯೆ ಹರಿಯುವಾಗ ತುಂಬ ತಣ್ಣಗೆ ಮಟ್ಟಸವಾಗಿ ಹರಿಯುತ್ತಿದ್ದಳು. ಬೇಸಿಗೆಯಲ್ಲಿ ನಮಗೆ ನೀರೂಡುತ್ತಿದ್ದವಳೂ, ನೀರಾಟವಾಡಲೂ ನಮಗೆ ಮಡಿಲು ಕೊಡುತ್ತಿದ್ದವಳೂ, ಮಳೆ ಸುರಿ ಸುರಿದು ಆಕಾಶವೇ ಕಾಣದಂತಾದ ಸಮಯದಲಿ ಸೊಕ್ಕಿ ನೆರೆಯುಕ್ಕಿಸುವವಳೂ ಇವಳೇ ಆಗಿದ್ದಳು. ನಮ್ಮ ಮಾಡುಹೊಳೆ. ಅವಳು ನಮ್ಮ ಬದುಕಿನ ಭಾಗವಾಗಿದ್ದಳು. ಅದೆಷ್ಟೇ ನೆರೆ ಬಂದರೂ ನಾವು ಅದರಲ್ಲೂ ಅವಳ ಚೆಲುವು ಕಂಡು ಸಂತೋಷ ಪಡುತ್ತಿದ್ದೆವೇ ಹೊರತು ಒಮ್ಮೆಯೂ ಅವಳನ್ನು ದೂರಿದ ನೆನಪೇ ಆಗುವುದಿಲ್ಲ. ನಾನು ಈಜು ಕಲಿತದ್ದು, ನನ್ನಂತೆ ಅನೇಕ ಮಕ್ಕಳು ಈಜು ಕಲಿತದ್ದು ಇದೇ ಮಾಡುಹೊಳೆಯಲ್ಲಿ. ಮಾಡುಹೊಳೆಯ ಕರೆಯಲ್ಲಿ ಒಂದು ದೊಡ್ಡ ನೇರಳೆ ಮರವಿತ್ತು. ಅದರ ಒಂದು ದೊಡ್ಡ ರೆಂಬೆ ನೇರ ಹೊಳೆಯ ನಡು ಮಧ್ಯಕೆ ಚಾಚಿಕೊಂಡಿತ್ತು. ಹುಡುಗರೆಲ್ಲ ಆ ಮರದ ಮೇಲೆ ಹತ್ತಿ ಆ ರೆಂಬೆಯ ಮೇಲೆ ಕೋತಿಗಳಂತೆ ಸರಕುತ್ತ ಹೋಗಿ, ಅಲ್ಲಿಂದ ಢಬಾಲನೆ ನೀರಿನೊಳಗೆ ಧುಮುಕಿ ಒಂದು ಕ್ಷಣ ಕಾಣದಾಗಿ ಮತ್ತೆ ಮೀನಿನಂತೆ ತಲೆ ಎತ್ತುತ್ತಿದ್ದರು. ಅವರು ನಮ್ಮ ಪೈಕಿ ಅತಿ ನುರಿತ ಈಜುಗಾರರೂ, ಧೈರ್ಯವಂತರೂ ಆಗಿದ್ದರು. ನಾನು ಈ ಕೆಲಸಕ್ಕೆ ಅಷ್ಟಾಗಿ ಮುಂದೆ ಬಾರದ ಒಬ್ಬ ಸಾಧಾರಣ ಹುಡುಗನಾಗಿದ್ದೆ. ಅಷ್ಟಾದರೂ ನನಗೆ ತಕ್ಕಮಟ್ಟಿಗೆ ಈಜು ಕಲಿಸಿ, ಮಾಡುಹೊಳೆಯಲ್ಲಿ ಆಡ ಬಿಟ್ಟವನು ನನ್ನ ಒಬ್ಬನೇ ಗೆಳೆಯ ಮಹ್ಮದ್ ಕುಟ್ಟಿ ಅಲಿಯಾಸ್ ಬಾಪುಟ್ಟಿ. ಅವನನ್ನು ಬಾಪುಟ್ಟಿಯೆಂದು ಕರೆಯುತ್ತಿದ್ದವನು ನಾನೊಬ್ಬನೇ. ಅದೇಕೆ ಅವನನ್ನು ಹಾಗೆ ಕರೆದೆನೆಂಬುವುದಕ್ಕೆ ನನ್ನಲ್ಲಿ ನಿಜಕ್ಕೂ ಉತ್ತರವಿಲ್ಲ. ಅಂತೂ ಅವನು ನನ್ನ ಪಾಲಿನ ಬಾಪುಟ್ಟಿಯಾಗಿದ್ದ. ಬಾಪುಟ್ಟಿಯ ಉಮ್ಮ ನನಗೂ ಉಮ್ಮನಾಗಿದ್ದಳು ಮತ್ತು ಇದನ್ನು ಹೇಳಬಾರದೇ ನನಗೆ ಗೊತ್ತಿಲ್ಲ. ಅವಳು ನನ್ನ ಅಪ್ಪನಿಗೆ ತುಂಬ ಬೇಕಾದವಳಾಗಿದ್ದಳು. ನಿನ್ನ ಉಮ್ಮನನ್ನು ಅವನ ಅಪ್ಪ ಇಟ್ಟುಕೊಂಡಿದ್ದಾನೆ ಕಣೋ. ಆದ್ರೂ ಯಾಕೆ ಅವನ ಜೊತೆ ಸಾಯ್ತೀಯ ಎಂದು ಕೆಲವು ಕಿಡಿಗೇಡಿ ಮಕ್ಕಳು ನಮ್ಮ ಕಣ್ಣೆದುರೇ ಬಾಪುಟ್ಟಿಗೆ ಹೇಳುತ್ತಿದ್ದರೆ ನನಗೆ ಏನು ಉತ್ತರ ಕೊಡಬೇಕೆಂದು ತಿಳಿಯುತ್ತಿರಲಿಲ್ಲ. ಆದರೆ ಬಾಪುಟ್ಟಿ ಮಾತ್ರ ಇಟ್ಟುಕೊಂಡರೆ ಇಟ್ಟುಕೊಳ್ಳಲಿ ನಿಮಗೇನು ಎಂದು ತಿರುಗಿ ನಿಲ್ಲುತ್ತಿದ್ದ. ನಮ್ಮಿಬ್ಬರಿಗೂ ಈ ಮಾತುಗಳು ಸಂಕಟವನ್ನುಂಟು ಮಾಡುತ್ತಿದ್ದವು. ಇನ್ನು ನನ್ನ ಸಂಕಟವೋ, ಅದು ಮನೆ ತನಕವೂ ಮುಂದುವರಿಯುತ್ತಿತ್ತು. ಮನೆಗೆ ಹೋದರೆ ಸಾಕು, ಅಮ್ಮ ಮೂಗು ಸೊರೆಯುತ್ತ ನಾನು ಬಾಪುಟ್ಟಿಯೊಡನೆ ಸೇರಬಾರದೆಂದು ಯಾವಾಗಲೂ ಹೇಳುತ್ತಿದ್ದಳು. ಅಪ್ಪ ಮಗ ಇಬ್ಬರೂ ಸೇರಿ ನನ್ನ ಜೀವ ತಿನ್ನಲಿಕ್ಕೇ ಹುಟ್ಟಿದ್ದೀರಿ ಅನ್ನುವಳು. ಕೋಳಿ, ನಾಯಿ, ಬೆಕ್ಕು ಎಲ್ಲದರ ಮೇಲೂ ರೇಗುವಳು. ಯಾವಾಗಲೂ ಮುನಿಸಿಕೊಂಡು ಅಪ್ಪನೊಡನೆ ಮಾತೇ ಆಡದೆ ಉಳಿವಳು. ಅಡುಗೆಯಲ್ಲಿ ಯಾವ ರುಚಿಯಿರುತ್ತಿರಲಿಲ್ಲ, ಕಾರಣವೇ ಇಲ್ಲದೆ ತಂಗಿಯ ಬೆನ್ನಿಗೆ